ತಿಳಿಸುತ್ತಾರೋ ನೋಡಿ ಅದರ ಬಗ್ಗೆ ಕ್ರಮ ಜರುಗಿಸುತ್ತೇನೆ.

ಶ್ರೀ ಅಶೋಕ್ ಕಾಟ್ವೆ:- ಮಾನ್ಯ ಅಧ್ಯಕ್ಷರೇ, ವಿದ್ಯುತ್ ಅಭಾವದಿಂದಲೂ ಸಹ ನೀರಿನ ಪೂರೈಕೆ ಕಡಿಮೆ ಆಗುತ್ತಿದೆ. ವೋಲ್ಟೇಜ್ ಕಡಿಮೆ ಆಗುತ್ತಿರುವುದರಿಂದ 15 ದಿವಸಕ್ಕೆ ಒಮ್ಮೆ, ತಿಂಗಳಿಗೆ ಒಮ್ಮೆ ನೀರು ಬಿಡುವ ಕಾರ್ಯಕ್ರಮ ಆಗುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಕೆ.ಇ.ಬಿ. ಅಧಿಕಾರಿಗಳಿಗೂ ಸ್ಪಷ್ಟವಾದ ಆದೇಶ ಕೊಡಬೇಕು ವಾಟರ್ ಸಪ್ಲೈಗೆ ಯಾವುದೇ ರೀತಿಯಿಂದ ವಿದ್ಯುತ್ ತೊಂದರೆ ಆಗಬಾರದು, ನೀರು ಪೂರೈಕೆ ಮಂಡಲಿ ಮತ್ತು ಕಾರ್ಪೊರೇಷನ್ ಅಧಿಕಾರಿಗಳ ನಡುವೆ ಅಸಹಕಾರ ಇದೆ. ಆದ್ದರಿಂದ ಅವರಲ್ಲಿ ಸಾಮರಸ್ಯವನ್ನು ಮೂಡಿಸಿ, ಆ ಅಧಿಕಾರಿಗಳ ಮೇಲೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ತಾವು ಒಂದು ಕೆಲಸ ಮಾಡಿ ಬಚ್ಚೇಗೌಡರೆ, ಹುಬ್ಬಳ್ಳಿ ಧಾರವಾಡ ಮಹಾನಗರದ ಸದಸ್ಯರುಗಳು ಯಾರು ಇದ್ದಾರೆ, ಅವರನ್ನು ಕರೆಸಿ ಅಧಿಕಾರಿಗಳನ್ನು ಕರೆಸಿ ಅವರ ಸಮಸ್ಯೆ ಪರಿಹಾರ ಮಾಡಿ.

ವಿಷಯ:- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಕೈಗಾರಿಕಾ ಶೆಡ್ಡುಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 70 (371)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95, 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ನಿರ್ಮಾಣವಾದ ಒಟ್ಟು ಕೈಗಾರಿಕಾ ಶೆಡ್ಡುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮಂಜೂರಾದ ಶೆಡ್ಡುಗಳೆಷ್ಟು?

ಇ) ಆ ಜನಾಂಗದವರಿಗೆ ಬೆಲೆಯಲ್ಲಿ ನೀಡಿದ ರಿಯಾಯಿತಿಯ ಪ್ರಮಾಣವೆಷ್ಟು?

ಶ್ರೀ ಬಿ.ಎ.ಮೊಯಿಯುದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ)	1994-95	186
	1995-96	257
	ಒಟ್ಟು	443
ಆ)	1994-95	27
	1995-96	64
	ಒಟ್ಟು	91

ಇ) ಶೆಡ್ಡಿನ ಬೆಲೆಯಲ್ಲಿ ಶೇಕಡ 40ರಷ್ಟು ಕಡಿಮೆ ಬೆಲೆಗೆ ಹರಿಜನ :ಗಿರಿಜನ ಸಣ್ಣ ಉದ್ಯಮಗಳಿಗೆ ನೀಡಲಾಗುತ್ತಿದೆ.

ಶ್ರೀ ಗೋವಿಂದ ಎಂ.ಕಾರಜೋಳ:- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಪ್ರತ್ಯೇಕ ಕೈಗಾರಿಕಾ ವಸಾಹತು ನಿರ್ಮಾಣ ಮಾಡಲಾಗಿದೆಯೇ? ಮಾಡಿರದಿದ್ದರೆ ಅದಕ್ಕೆ ಕಾರಣಗಳು ಏನು?

ಶ್ರೀ ಬಿ.ಎ. ಮೊಯಿದ್ದೀನ್:- ಮಾನ್ಯ ಅಧ್ಯಕ್ಷರೇ, 91 ಕೈಗಾರಿಕಾ ಶೆಡ್ಡುಗಳನ್ನು ನಾವು ಕೊಟ್ಟಿದ್ದೇವೆ. ಜಿಗಣಿಯಲ್ಲಿ ಸೆಂಟನರಿ ಪ್ರೋಗ್ರಾಂ ಅನ್ವಯವಾಗಿ ಎಸ್‌ಸಿ ಮತ್ತು ಎಸ್‌ಟಿಯವರಿಗೆ ಸುಮಾರು 17.4 ಎಕರೆ ಜಮೀನನ್ನು ವಶಪಡಿಸಿಕೊಂಡು, ಸುಮಾರು 100 ಶೆಡ್ಡ್‌ಗಳನ್ನು ಮಾಡುವಂಥ ಯೋಜನೆ ಇದೆ. ಇದರ ಜೊತೆಗೆ 84 ಪ್ಲಾಟ್‌ಗಳನ್ನು ಸಹ ಮಾಡುತ್ತಿದ್ದೇವೆ. ಆದರೆ ಆ ಪ್ಲಾಟ್‌ಗಳನ್ನು ಯಾರು ತೆಗೆದುಕೊಳ್ಳುತ್ತಿಲ್ಲ. ಈ ವರ್ಗದ ಜನರನ್ನು ಬೇರೆ ಇಡುವಂತಾದ್ದು ಸರಿಯಲ್ಲ. ಮುಂದೆ ಈ ಹರಿಜನ ಮತ್ತು ಗಿರಿಜನರಿಗೆ ಶೇಕಡ 10 ಪರ್ಸೆಂಟ್ ಮೀಸಲಾತಿ ಏನು ಇಟ್ಟಿದ್ದೇವೆ, ಅದನ್ನು ಮುಂದುವರಿದವರು ಯಾರು ಇದ್ದಾರೆ ಅವರ ಮಧ್ಯದಲ್ಲಿ ಅವರಿಗೆ ಕೊಡತಕ್ಕಂಥ ಸಲಹೆಯನ್ನು ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ಅದರ ಜೊತೆಗೆ ಹರಿಜನ ಗಿರಿಜನರಿಗೆ ಏನು 10 ಪರ್‌ಸೆಂಟ್ ರಿಸರ್ವೇಷನ್ ಕೊಟ್ಟಿದ್ದೇವೆ ಅದರ ಪ್ರಕಾರ ಅವರನ್ನು ಇಂಡಿಸ್ಟ್ರಿಯಲ್ ಕ್ಲೈಮೇಟ್‌ನಲ್ಲಿ ತರುವುದು ಬಹಳ ಅಗತ್ಯ ಇದೆ. ಒಳ್ಳೆಯ ತಾಂತ್ರಿಕ ತಜ್ಞರಾಗತಕ್ಕಂಥ ಅರ್ಹತೆ ಅವರಿಗೆ ಇದೆ, ಅದಕ್ಕಾಗಿ ಅವರಿಗೆ ತರಬೇತಿ ಕೊಡಬೇಕಾಗಿದೆ. ಅದು ಬಿಟ್ಟು ಎಸ್‌ಸಿಪಿ ಮತ್ತು ಟ್ರೈಬಲ್ ಸಬ್ ಪ್ಲಾನ್‌ನಲ್ಲಿ ಇರತಕ್ಕಂಥ ಪಣವನ್ನು ಖರ್ಚುಮಾಡಬೇಕಾಗಿದೆಯಲ್ಲ ಎಂದು ಖರ್ಚುಮಾಡಬಾರದು. ಅವರನ್ನು ತಾಂತ್ರಿಕ ತಜ್ಞರನ್ನಾಗಿ ತಯಾರು ಮಾಡತಕ್ಕಂಥ ಕೆಲಸವನ್ನು ನಾವು ಮುಂದೆ ಮಾಡುತ್ತೇವೆ ಎನ್ನುವ ಭರವಸೆಯನ್ನು ತಮ್ಮ ಮೂಲಕ ಶಾಸಕರಿಗೆ ಕೊಡುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ:- ಮಾನ್ಯ ಅಧ್ಯಕ್ಷರೆ, ಯಾವ ಜನ್ಮದ ಪಾಪದ ಪ್ರತಿಫಲವೋ ಗೊತ್ತಿಲ್ಲ, ಊರುಗಳಲ್ಲಿ ★★ ಪ್ರತ್ಯೇಕ ಮಾಡಿದ್ದರು, ಸ್ಮಶಾನಗಳನ್ನು ಪ್ರತ್ಯೇಕ ಮಾಡಿದ್ದರು, ಅದೇ ರೀತಿ ಕೈಗಾರಿಕಾ ವಸಾಹತುಗಳಲ್ಲೂ ಸರ್ಕಾರವೇ ಪ್ರತ್ಯೇಕ ಮಾಡುವುದು ಸರಿಯಲ್ಲ, ಅಭಿವೃದ್ಧಿ ಹೊಂದಿದ ಕೈಗಾರಿಕಾ ವಸಾಹತುಗಳ ಮಧ್ಯದಲ್ಲೇ ಹರಿಜನ ಗಿರಿಜನರಿಗೆ ಶೆಡ್ಡುಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ನೀವು ಏನು ಅಪೇಕ್ಷೆ ಪಟ್ಟಿದ್ದೀರೋ ಅದನ್ನೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರತಕ್ಕಂಥ 443 ಶೆಡ್ಡುಗಳಲ್ಲಿ ಬೆಂಗಳೂರಿನಂಥ ಪಟ್ಟಣ ಪ್ರದೇಶಗಳಲ್ಲಿ ಎಷ್ಟು ಕೊಟ್ಟಿದ್ದೀರಿ? ಬಿಲ್ಲಾ

★★ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಟ್ಟದಲ್ಲಿ ಎಷ್ಟು ಕೊಟ್ಟಿದ್ದೀರಿ? ತಾಲ್ಲೂಕು ಮಟ್ಟದಲ್ಲಿ ಎಷ್ಟು ಕೊಟ್ಟಿದ್ದೀರಿ? ಅದರಲ್ಲಿ ಕನ್ನಡಿಗರಿಗೆ ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ಕನ್ನಡೇತರರಿಗೆ ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ಎನ್ನುವ ಅಂಕಿ ಅಂಶವನ್ನು ಕೊಟ್ಟರೆ ಬಹಳ ಒಳ್ಳೆಯದು.

ಅಧ್ಯಕ್ಷರು:- ಅದರ ಬಗ್ಗೆ ನೋಟೀಸ್ ಕೊಟ್ಟು ಪೂರ್ಣ ವಿವರಗಳನ್ನು ಇನ್ನೊಂದು ಸಾರಿ ತರಿಸಿಕೊಳ್ಳಿ.

ಶ್ರೀ ಬಿ.ಎ. ಮೊಯಿಯುದ್ದೀನ್:- ಶೆಡ್ಡುಗಳ ಅಲಾಟ್‌ಮೆಂಟಿಗೆ ಒಂದು ನಿಯಮಾವಳಿ ಇದೆ, ಅದರ ಪ್ರಕಾರ ಶೆಡ್ಡುಗಳನ್ನು ಹಂಚಲಾಗಿದೆ. ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಎಂಬ ಮೀಸಲಾತಿ ಇದರಲ್ಲಿ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಶೆಡ್ಡುಗಳು ಹೆಚ್ಚಾಗಿ ಕನ್ನಡೇತರರಿಗೆ ಸಿಕ್ಕಿದೆಯೇ ಹೊರತು ಕನ್ನಡಿಗರಿಗೆ ಸಿಕ್ಕಿರುವುದಿಲ್ಲ.

ಶ್ರೀ ಬಿ.ಎ. ಮೊಯಿಯುದ್ದೀನ್:- ಇದರ ಅಂಕಿ ಅಂಶಗಳನ್ನು ನಾನು ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುತ್ತಾ ಹೊಲಗೇರಿ ಎನ್ನುವ ಪದವನ್ನು ಬಳಸಲು, ಹೊಲೆಗೇರಿಗಳು ಎಲ್ಲಿವೆಯೆಂದು ನನಗೆ ಗೊತ್ತಿಲ್ಲ, ಹರಿಜನರ ಕೇರಿಗಳನ್ನು ಗಿರಿಜನರ ಕೇರಿಗಳನ್ನು ನಾನು ನೋಡಿದ್ದೇನೆ, ಅದಕ್ಕಾಗಿ ಅವರು ಉಪಯೋಗ ಮಾಡಿರುವ ★★ ಪದವನ್ನು ಕಡತದಿಂದ ತೆಗೆದುಹಾಕಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಮತ್ತು ಅವರು ಆ ಪದವನ್ನು ವಾಪಸ್ ಪಡೆಯಬೇಕೆಂದು ನಾನು ಕೇಳುತ್ತೇನೆ.

ಅಧ್ಯಕ್ಷರು:- ಹರಿಜನ ಗಿರಿಜನ ಎನ್ನುವುದು ಕೃತಕವಾದ ಪದ, ಹರಿಜನ-ಗಿರಿಜನ ಎಂದು ಯಾರೂ ಇಲ್ಲ. ಪರಿಶಿಷ್ಟ ಜಾತಿಯವರು ಮತ್ತು ಪರಿಶಿಷ್ಟ ಜನಾಂಗದವರು ಎಂದು ಇದ್ದಾರೆ, ಹರಿಜನ-ಗಿರಿಜನ ಎಂದು ಬಳಸುವುದೇ ಅಕ್ಷಮ್ಯ ಅಪರಾಧ, ಅದನ್ನು ಉಪಯೋಗಿಸಬಾರದು. ★★ ಎಂದು ಮಾತನಾಡುವುದು ಸತ್ಯವಾಗುತ್ತದೆ. ಆದರೆ, ಅದು ರೆಕಾರ್ಡ್‌ಗೆ ಹೋಗಬೇಕೋ ಬೇಡವೋ ಎಂದು ನಾನು ಆಮೇಲೆ ಯೋಚನೆ ಮಾಡುತ್ತೇನೆ.

ವಿಷಯ:- 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂಜೂರಾದ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 71 (586)

★★ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.